**<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ13.02.2026 ರಂದು ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಪಿ ಎಂ ವಕೀಲರಿಂದಃ</u>**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಬಸಮ್ಮನವರು ನನ್ನ ತಂದೆಯ ತಾಯಿ ಅಂದರೆ ನನ್ನ ಅಜ್ಜಿ ಇರುತ್ತಾರೆ. ನಾನು ಕಾಳಿಹುಂಡಿ ಗ್ರಾಮದಿಂದ ತಿ.ನರಸೀಪುರಕ್ಕೆ ಮದುವೆಯಾಗಿ ಬಂದಿರುತ್ತೇನೆ. ಮದುವೆ ಆದಾಗಿನಿಂದ ನಾನು ತಿ.ನರಸೀಪುರದಲ್ಲಿ ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿ, ಸಾಕ್ಷಿಯು ಮುಂದುವರಿದು ನಾನು ಕಾಳಿಹುಂಡಿ ಗ್ರಾಮಕ್ಕೂ ಕೂಡಾ ಹೋಗಿ ಬಂದು ಮಾಡುತ್ತೇನೆ ಎಂದು ನುಡಿಯುತ್ತಾರೆ. ನನ್ನ ಆಧಾರ ಕಾರ್ಡ್, ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ ಮತ್ತು ಎಲ್ಲಾ ವೈಯಕ್ತಿಕ ದಾಖಲೆಗಳಲ್ಲಿ ನನ್ನ ವಿಳಾಸ ತಿ.ನರಸೀಪುರ ಎಂದು ದಾಖಲಿಸಿರುತ್ತದೆ. ನಾನು ಗೃಹಿಣಿ ಇರುತ್ತೇನೆ.

ಮೂಲ ವಾದಿಯಾದ ಬಸಮ್ಮನವರು ಈ ದಾವೆಯನ್ನು ದಾವಾ ಸ್ವತ್ತು ಅವರದ್ದು ಎಂದು ಹೂಡಿರುತ್ತಾರೆ. ಬಸಮ್ಮನವರು ಕೂಡಾ ಗೃಹಿಣಿಯಾಗಿದ್ದರು ಎಂದರೆ ಸರಿ. ಹುಚ್ಚೇಗೌಡರು ಬಸಮ್ಮನವರ ಗಂಡ ಇರುತ್ತಾರೆ. ಹುಚ್ಚೇಗೌಡರು ದಾವಾ ಸ್ವತ್ತನ್ನು ಸುಮಾರು 60 ವರ್ಷಗಳ ಹಿಂದೆ ಖರೀದಿಸಿದ್ದರು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಬಸಮ್ಮನವರು ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಬಸಮ್ಮನವರಿಗೆ ಗಂಡನ ಆದಾಯ ಮೂಲ ಹೊರತುಪಡಿಸಿ ಬೇರೆ ಯಾವುದೇ ಆದಾಯದ ಮೂಲ ಇರಲಿಲ್ಲ ಎಂದರೆ ಸಾಕ್ಷಿಯು ಅವರು ಹಸು, ಎಮ್ಮೆ ಸಾಕಿ ಹಾಲು ಮಾರಿ ಸಂಪಾದನೆ ಮಾಡುತ್ತಿದ್ದರು ಮತ್ತು ಅವರ ತಂದೆಯ ಮನೆಯಿಂದ ಕೂಡಾ ಆದಾಯ ಹೊಂದಿದ್ದರು ಎಂದು ನುಡಿಯುತ್ತಾರೆ. ಬಸಮ್ಮನವರು ಹಸು, ಎಮ್ಮೆಗಳನ್ನು ಸಾಕಿ ಅವುಗಳ ಹಾಲು ಮಾರಿ ಹಣ ಸಂಪಾದಿಸುತ್ತಿದ್ದರು ಮತ್ತು ಅವರ ತವರು ಮನೆಯಿಂದ ಕೂಡಾ ಆದಾಯ ಇತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ.

ದಾವಾ ಸ್ವತ್ತು ಮತ್ತು ಒಟ್ಟು ಕುಟುಂಬದ ಎಲ್ಲಾ ಸ್ವತ್ತುಗಳನ್ನು ಬಸಮ್ಮ, ಮಾದೇಗೌಡ ಮತ್ತು ಬಸವೇಗೌಡ ಮೂವರು ತಮ್ಮ ನಡುವೆ ಮೌಖಿಕವಾಗಿ ವಿಭಾಗಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದಂತೆ ದಾವಾ ಸ್ವತ್ತು ಬಸವೇಗೌಡರ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಬಸವೇಗೌಡರು ಮೃತಪಟ್ಟ ನಂತರ ಸದರಿ ಸ್ವತ್ತಿನ ಖಾತೆಯು ಅವರ ಮಗನಾದ ಬಿ. ಸ್ವಾಮಿ ಅವರ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ.

ಬಸವೇಗೌಡರ ಹೆಸರಿಗೆ ವಿಭಾಗದಂತೆ ಖಾತೆಯಾಗುವ ಸಂದರ್ಭದಲ್ಲಿ, ಸದರಿ ಆಸ್ತಿಯನ್ನು ಹುಚ್ಚೇಗೌಡರು, ಬಸವೇಗೌಡ ಮತ್ತು ಮಾದೇಗೌಡ ಒಟ್ಟಾಗಿ ಸೇರಿ ಖರೀದಿ ಮಾಡಿದ ಕಾರಣ, ವಾದಿ ಯಾವುದೇ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹುಚ್ಚೇಗೌಡರು ಯಾರಿಂದ ಖರೀದಿಸಿದ್ದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸದರಿ ದಾವಾ ಸ್ವತ್ತನ್ನು ಬಸಮ್ಮನವರು ಚೌಡಮ್ಮನವರಿಂದ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಖಾತೆಯು ಚೌಡಮ್ಮನವರಿಂದ ಬಸವೇಗೌಡರ ಹೆಸರಿಗೆ ನೇರವಾಗಿ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಚೌಡಮ್ಮನವರಿಂದ ಬಸಮ್ಮನವರಿಗೆ ಖಾತೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಬಸಮ್ಮನವರ ಹೆಸರಿಗೆ ಖಾತೆಯಾದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಬಸವೇಗೌಡರಿಗೆ ಖಾತೆಯಾಗುವ ಸಂದರ್ಭದಲ್ಲಿ ಬಸಮ್ಮನವರು ತಕರಾರು ಸಲ್ಲಿಸಿದ ಬಗ್ಗೆ ನನಗೆ ನೆನಪಿಲ್ಲ.

ಹುಚ್ಚೇಗೌಡರು ಮೃತಪಟ್ಟ ನಂತರ ಅವರ ಹೆಂಡತಿಯಾದ ಬಸಮ್ಮ, ಮಕ್ಕಳಾದ ಬಸವೇಗೌಡ ಮತ್ತು ಮಾದೇಗೌಡ ರವರು ವಿಭಾಗ ಮಾಡಿಕೊಂಡಾಗ ಕೊಪ್ಪಾಳು ಗ್ರಾಮದ ಸ.ನಂ.32/5 ರಲ್ಲಿ 37 ಗುಂಟೆಯನ್ನು ಬಸಮ್ಮನವರಿಗೆ ಜೀವನಾಂಶಕ್ಕಾಗಿ ಕೊಡಲಾಗಿತ್ತು ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ದಿಃ16.09.2005 ರಲ್ಲಿ ಬಸಮ್ಮನವರಿಂದ ನಾನು ಮೋಸದಿಂದ ಕ್ರಯ ಎಂದು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಿಃ16.09.2005 ರಲ್ಲಿ ಬಸಮ್ಮನವರನ್ನು ನಾನು ಹಬ್ಬಕ್ಕೆ ಎಂದು ಮನೆಗೆ ಕರೆದುಕೊಂಡು ಬಂದು ಯಾರಿಗೂ ತಿಳಿಯದಂತೆ ಅವರಿಂದ ನಾನು ನೋಂದಾಯಿತ ಕ್ರಯಪತ್ರ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಬಸವೇಗೌಡರವರೇ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಬಸವೇಗೌಡರೇ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದು ಅವರ ಹೆಸರಿನಲ್ಲೇ ಖಾತೆ ಇದ್ದು ಅವರು ಜೀವಂತವಿರುವವರೆಗೂ ಸದರಿ ಆಸ್ತಿಗೆ ಕಂದಾಯ ಕಟ್ಟುತ್ತಿದ್ದರು ಎಂದರೆ ಸರಿಯಲ್ಲ. ಬಸವೇಗೌಡರು ಜೀವಂತವಿದ್ದಾಗ ದಾವೆ ಹೂಡಲು ವಾದಿಗೆ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಬಸವೇಗೌಡರು ಮೃತಪಟ್ಟ ನಂತರ ಅವರ ಮಗನಾದ ಬಿ. ಸ್ವಾಮಿ ಹೆಸರಿಗೆ ಖಾತೆ ಮಾಡಿದಾಗ ನಾವು ತಕರಾರು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಮೋಸದಿಂದ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಬಸವೇಗೌಡರು ಮತ್ತು ಬಿ. ಸ್ವಾಮಿಯವರು ದಾವಾ ಸ್ವತ್ತಿನಲ್ಲಿ ಉಳುಮೆ ಮಾಡುವ ಸಂದರ್ಭದಲ್ಲಿ ಬಸಮ್ಮ ಆಗಲೀ ಅಥವಾ ನಾನಾಗಲೀ ಅವರಿಗೆ ಯಾವುದೇ ಅಡಚಣೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಬಸಮ್ಮನವರೇ ಉಳುಮೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

(ಸಚಿನ್ ಹೆಚ್.ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ .ಎಂ .ಎಫ್ .ಸಿ ., ತಿ .ನರಸೀಪುರ .